ಮಂಗ್ಯೆ, ಏನಾದರೂ ಓದಿ ಸಿಟಿ ಮುನಿಸಿಪಾಲಿಟಿಯಲ್ಲಿ ಕುರ್ಚಿಯ ಮೇಲೆ ಕೂತು ಬರೆಯುವ, ತಿಂಗಳ ಸಂಬಳ ತರುವ, ಅಷ್ಟಿಷ್ಟು ಮೇಲುಕಾಸು ಬರುವ ಗುಮಾಸ್ತನಾಗಲಿ ಅಂದರೆ ಮದರಾಸಿಗೆ ಕುಣಿಯಲು ಹೋಗುತ್ತೇನೆ ಅನ್ನುವನಲ್ಲಾ ಬದ್ಮಾಷ್, ಮದರಾಸೆಂಬುದು ಇವನ ಕೈಯ್ಯಳತೆಯ ಮಾರುದ್ದದಲ್ಲಿದೆಯೇ, ಎಲ್ಲಾದರೂ ಸಾಯಲಿ ಇವನ ಹಣೆ ಬರಹ ಎಂದ. ಇದರ ಮೇಲೆ ಯಾವಾಗಲೋ, ಯಾರಿಂದಲೋ ಕೇಳಿಸಿಕೊಂಡಿದ್ದಂತೆ ಮಂಗ್ಯೆಪುಳ್ಳೆ ಮಹಾತ್ಮ ಗಾಂಧಿಯವರು ಸ್ವತ ತಮ್ಮ ಆಶ್ರಮದಲ್ಲಿ ಚರಂಡಿ ಕ್ಲೀನು ಮಾಡುತ್ತಿದ್ದರು ಗೊತ್ತಾ... ಅಂದು ತಾನು ನೆರವೇರಿಸುತ್ತಿರುವ ಲೋಕಸೇವೆಯೇನೂ ಕಡಿಮೆಯದಲ್ಲ ಅಂದು ಸತಿಪುತ್ರರ ಮುಂದೆ ತನ್ನ ನಿತ್ಯ ಕಾಯಕದ ಗೌರವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಆದರೆ ಕನ್ನಗಿಗೆ, 'ಮಗಾತ್ಮಾ ಕಾಂಧಿ' ಯಾರೆಂಬುದೇ ಗೊತ್ತಿರಲಿಲ್ಲವಾಗಿ ಗಂಡನ ಕಾಯಕದ ಬಗ್ಗೆ ಅವಳಿಗೆ ಮರ್ಯಾದೆ ಹುಟ್ಟಲೇ ಇಲ್ಲ. ಹೀಗಾಗಿ ಕನ್ನಗಿ ತಾನೇ ಖುದ್ದಾಗಿ ಮಗನ ಪರ ವಹಿಸಿ, ನೀವು ಸೇರಿಸಿರುವ ತಮಿಳು ಸ್ಕೂಲಲ್ಲಿ ಓದಿದರೆ, ನಿಮ್ಮಂತೆಯೇ ಬೆಳಗ್ಗೆದ್ದು ಚರಂಡಿ ಕಸ ಗುಡಿಸುವವರೊಂದಿಗೆ ಜಗಳವಾಡಿಕೊಂಡು, ಸರಿಯಾಗಿ ಗುಡಿಸಿಲ್ಲವೆಂದು ಬೀದಿ, ಬೀದಿ ಮನೆಯರೊಂದಿಗೆ ಕಂಪ್ಲೇಂಟು ಕೇಳಿಕೊಂಡು ಅಡ್ಡಾಡಬೇಕಾಗುತ್ತದೆ. ಮಗನು ಡ್ಯಾನ್ಸು ಕಲಿತು ಮದರಾಸಿಗೇ ಹೋಗಲಿ ಎಂದಳು. ಈ ಪ್ರೋತ್ಸಾಹದ ಮಾತಿನಿಂದ ಚಿನ್ನಪಳನಿಯು ಬೀದಿಯಲ್ಲಿ ಸ್ಮಶಾನಗಾಮಿ ಹೆಣ ಇಲ್ಲವೇ ಯಾವುದೇ ಮೆರವಣಿಗೆಯ ಮುಂದಿನ ತಮಟೆ ಸದ್ದು ಕೇಳಿಸಲು ವಪ್ಪಾರೆಯಿಂದ ಒಂದೇ ಏಟಿಗೆ ನೃತ್ಯಭಂಗಿಯಲ್ಲೇ ಜಿಗಿದು ಹುಡುಗರೊಂದಿಗೆ ಸೇರಿ ಕುಣಿಯತೊಡಗಿದ.

ಮಗನ ಕುಣಿತವನ್ನು ಕಂಡು ಅವ್ವ ಸಂತೋಷ ಪಡುವಲ್ಲಿ, ಮೇಸ್ತ್ರಿಗೆ ಮಾಮ್ಮೇರಿ ಸಿಟ್ಟು ಏರಿ ಸುಲಭದಲ್ಲಿ ಕೈಗೆ ಸಿಗುತ್ತಿದ್ದ ಹೆಂಡತಿಯನ್ನು ತದುಕಿ ನಿತ್ಯಕಾಯಕದ ಮೇಲೆ ಬೀದಿಯಾಚೆಗೆ ಬೀಳುತ್ತಿದ್ದ. ಅಂಥ ಸಮಯದಲ್ಲೇ ಸ್ಮಶಾನದತ್ತ ಕುಣಿದುಕೊಂಡು ಬರುತ್ತಿದ್ದ ಪಳನಿಯನ್ನು ಕಂಡು ಕಣ್ಣಾಸೆಲ್ವಿ ಮೋಹಿಸಿದ್ದು! ಆ ಮೊದಲು ಕಣ್ಣಾಸೆಲ್ವಿಯೂ ಪಳನಿಯ ಪ್ರೌಢಶಾಲೆಗೆ ಹೋಗುತ್ತಿದ್ದಳು ನಿಜ, ಆದರೆ ಅಲ್ಲಿ ಮಾತ್ರ ಅವನನ್ನು ಕಣ್ಣೆತ್ತಿ ನೋಡಿದವಳಲ್ಲ. ಚೆನ್ನಾಗಿ ದೃಷ್ಟಿಸಿ ನೋಡಿದ್ದು ಸ್ಮಶಾನದತ್ತ ಅವನು ಪ್ರಾಯಸ್ಥ ಹುಡುಗರ ನಡುವೆ ಸಿಳ್ಳೆ ಹಾಕಿ ಎದ್ದೆದ್ದು ಕುಣಿದುಕೊಂಡು ಬರುವಾಗಲೇ! ಅವಳೂ ಕೂಡ ಮಿಕ್ಕೆಲ್ಲ ಹುಡುಗ ಹುಡುಗಿಯರಂತೆ ಸೂಪರ್‌ಸ್ಟಾರ್ ಚಂದ್ರಕಾಂತ್ ಅಭಿಮಾನಿಯಾಗಿದ್ದುದರಿಂದ, ಪಳನಿಯ ಕುಣಿತ ಹಾಗೆಯೇ ಇದೆ ಅಂದುಕೊಂಡಳು.

ಚಿನ್ನಪಳನಿ, ಕಣ್ಣಾಸೆಲ್ವಿಯರ ಸಂಭಾಷಣೆಯು ಮೊದಲ ಬಾರಿಗೆ ಸ್ಮಶಾನದಲ್ಲಿ ಆರಂಭವಾಗಲು, ಅಲ್ಲಿಯೂ ಅವರ ಮಾತುಕತೆ ಸ್ಟಾರ್ ಚಂದ್ರಕಾಂತ್ ಅವರ ಎದುರು ತಾನು ಇಷ್ಟರಲ್ಲಿಯೇ ನೃತ್ಯಗೈಯ್ಯುವವನೇ ಸೈ ಎಂಬ ಪಳನಿಯ ಪ್ರತಿಜ್ಞೆಯೊಂದಿಗೆ ಆರಂಭವಾಯಿತು. ಅತ್ತ ಅವ್ವನೂ, 'ನೀ ಅಪ್ಪಡಿಯೇ ಸಯಿಡಾ ಕಣ್ಣಾ, ಇಂದ ಊರೇ ವ್ಯಾಂಡ' ಎಂದು ಹಾರೈಸಿ, ಮಗನು ಮದರಾಸು ಮುಟ್ಟಿದ ಮೇಲೆ ತಾನೂ ಈ ಊರ ಚರಂಡಿಯ ಮುಂದಿನ ದುರ್ವಾಸನೆಯ ಗಂಡನನ್ನು ಬಿಟ್ಟು ಬಂದುಬಿಡುವೆನೆಂದಳು.

ಪಳನಿ ಮುಂದೆ ಕಣ್ಣಾಸೆಲ್ವಿಯು ಆಡಿದ ಚಿಗುರು ಪ್ರೇಮದ ಮೊದಲ ಸಂಭಾಷಣೆಯೂ ಅದೇ ಆಗಿತ್ತು. ಇನ್ನೂ ಪ್ರೇಮದ ಉನ್ಮತ್ತ ಗತಿಯು ಒಂದು ಹಂತಕ್ಕೆ ಬರದೇ ಹೋಗಿದ್ದುದರಿಂದ, ಪಳನಿಯ ಭವಿಷ್ಯವನ್ನು ಕುರಿತು ಸೆಲ್ವಿ ಮನದುಂಬಿ ಹಾರೈಸುವವಳಂತೆ, 'ಚಂದ್ರಕಾಂತ್ ಸಾರ್ ಪಾಕ್ಕರದುಕ್ಕು ಚೆನ್ನೈ ಪೋರಿಂಗಳಾ, ಅಯ್ಯೋ ಅಮ್ಮಾ ನಾನೂ ಅವರೈ ಪಾಕ್ಕಣು' ಎಂದು ಎರಡೂ ಕೈಯ್ಯಲ್ಲಿ ಕೆನ್ನೆಯನ್ನಲ್ಲದೆ ಕಡೆಗೆ ಕಣ್ಣನ್ನೂ ಅರೆ ಮುಚ್ಚಿಕೊಂಡಳು. ಹಾಗೆ ಪೂರ್ತಿ ಕಣ್ಣು ಮುಚ್ಚಿಕೊಂಡರೆ ಎದುರು ನಿಂತ ಏರುಪ್ರಾಯದ ಪಳನಿ ಎಲ್ಲಿ ಕಾಣುವುದಿಲ್ಲವೋ ಎಂಬ ಆತಂಕವೂ ಇದ್ದಿತು.